**<u>ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ</u>**

**<u>ದಿನಾಂಕ: 05.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಎದುರುದಾರರ ಪರ</u>**
**<u>ಶ್ರೀ . ಎಂ.ಹೆಚ್.ಪಿ. ವಕೀಲರಿಂದ:</u>**

ನಾನು ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದು ಈಗ ನಿವೃತ್ತಿ ಹೊಂದಿರುತ್ತೇನೆ ಎಂದರೆ ಸರಿ . ನಾನು ಎಲ್ಲಾ ದಾಖಲಾತಿಗಳ ಮೇಲೆ ಆಂಗ್ಲಭಾಷ್ಷೆಯಲ್ಲಿ ಸಹಿ ಮಾಡುತ್ತೇನೆ ಎಂದರೆ ಸರಿ . ಸದರಿಅರ್ಜಿಯನ್ನು ಸ.ನಂ: 125/1ಕ್ಕೆ ಸಲ್ಲಿಸಿರುತ್ತೇನೆ. ಸದರಿ ಜಮೀನಿನ ಮೇಲಿರುವ ನನ್ನ ಸ್ವಾಧೀನಕ್ಕೆ ಪ್ರತಿವಾದಿಯಾಗಲೀ ಅಥವಾ ಅವರ ವಾರಸುದಾರರಾಗಲೀ ಎಂದಿಗೂ ತೊಂದರೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪ್ರತಿವಾದಿ ನ್ನನನ್ನು ಅಟ್ಟಿಸಿಕೊಂಡು ಬಂದು ಹೊಡೆಯಲು ಬಂದಿರುತ್ತಾರೆ ಎನ್ನುತ್ತಾರೆ. ಪ್ರತಿವಾದಿ ವಿರುದ್ದ ನಾನು ಓ.ಎಸ್.159/2008 ಶಾಶ್ವತ ನಿರ್ಭಂದಕಾಜ್ಞೆ ಕೋರಿ ಸಲ್ಲಿಸಿದ್ದೆ ಎಂದರೆ ಸರಿ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿರುವ ವಿಚಾರಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ದಾವಾಸ್ವತ್ತಿನ ಚಕ್ಕುಬಂದಿ ಪಶ್ಚಿಮಕ್ಕೆ- ಕೊಡಗೀಹೊಲ ಮತ್ತು ದೇವಸ್ಥಾನದ ಜಾಗ , ಪೂರ್ವಕ್ಕೆ- ನನಗೆ ಸೇರಿದ ಮುನ್ಸಿಪಲ್ ಖಾತೆ ಉಳ್ಳ ಮನೆ , ಉತ್ತರಕ್ಕೆ - ಕನ್ನಡ ಪಂಡಿತರಾದ ಹನುಮಂತರಾವ್ ರವರ ಮನೆ ಮತ್ತು ಹಿತ್ತಿಲು , ದಕ್ಷಿಣಕ್ಕೆ- ತಿರುಗಾಡಲು ಇರುವ ದಾರಿ . ದಾವಾಸ್ವತ್ತು ಗುಬ್ಬಿಯ ಚೆನ್ನಬಸವೇಶ್ವರ ಸ್ವಾಮಿ ದೇವಸ್ಥಾನದ ಬಳಿ ಇರುವ ಮಲ್ಲೇಶ್ವರ ಸ್ವಾಮಿ ದೇವಸ್ಥಾನದ ಬಳಿ ಬರುತ್ತದೆ ಎಂದರೆ ಸುಳ್ಳು. ನಿ.ಪಿ.3 ದೂರಿನಲ್ಲಿ ಬರೆದಿರುವಂತೆ ಯಾವುದೇ ಘಟನೆ ನಡೆಯದೇ ಇದ್ದರೂ ಎದುರುದಾರರ ವಿರುದ್ದ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಎದುರುದಾರರ ವಿರುದ್ದ ಈ ಸುಳ್ಳು ದಾಖಲಾತಿ ಸಲ್ಲಿಸಿ ಎದುರುದಾರರಿಗೆ ತೊಂದರೆ ನೀಡಲು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**
**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**